ಗುಮಾನಿಯೊಂದು ಮನದ ಮೂಲೆಯಲ್ಲಿ ಹುಟ್ಟಿ, ಹಾಗಾದರೆ ಮೊದಲ ಆದ್ಯತೆ ಯಾವುದು ಎಂದೇ ತಿಳಿಯದೆ ಗೊಂದಲಗೊಂಡ.

ಅದುವರೆಗೆ ಪಟ್ಟಿ ಮಾಡಿದೆಲ್ಲವೂ ವರ್ತಮಾನದಾಚೆಯ ಸಂಭವಗಳಿಗೆ ಸಂಬಂಧಪಟ್ಟ ವಿಷಯಗಳೇ ಹೊರತು ಯಾವುದೂ ಸದ್ಯದ ತನ್ನ ಪರಿಸ್ಥಿತಿಯನ್ನು ಎತ್ತಿ ಹಿಡಿದಿಲ್ಲವೆನ್ನಿಸಿದ್ದೇ, ಆಫೀಸ್ ಬಿಡುವುದಕ್ಕೆ ಮುಂಚೆ ಅದುವರೆಗೆ ಟೈಪ್ ಮಾಡಿದ ಎಲ್ಲಾ ಪಾಯಿಂಟುಗಳನ್ನೂ ಡಿಲೀಟ್ ಮಾಡಿ, ಕೊನೆಯದಾಗೊಮ್ಮೆ ಸಮಯ ನೋಡಿಕೊಂಡ. ದಿನಗಳೆಲ್ಲಾ ಮುಗಿದು, ಗಂಟೆಗಳು ನಿಮಿಷಗಳ ರೂಪಕ್ಕೆ ಇಳಿಯುತ್ತಿರುವಂತಹ ಹೊತ್ತು...

ತನ್ನ ಕಟ್ಟ ಕಡೇ ಕ್ಷಣಗಳನ್ನು ಮನೆಯಲ್ಲಿ ಕಳೆಯುವ ಅಪೇಕ್ಷೆಯಾಗಿ, ಅವಸರವಸರದಲ್ಲಿ ಲಾಗ್‌ಔಟಾಗಿ, ಲಿಫ್ಟಿನಿಂದಿಳಿದು, ಟೂವೀಲರ್ ಪಾರ್ಕಿಂಗ್ ಸ್ಲಾಟ್‌ಗೆ ಬಂದ. ಎದುರಿನ ಬೃಹದಾಕಾರದ ಭವ್ಯ ಕಟ್ಟಡದ ಆಫೀಸನ್ನು, ಅಂತಿಮ ಬಾರಿ ವೀಕ್ಷಿಸುವ ಹೆಣದ ಮುಖದಂತೆ ನಿರ್ವಿಕಾರದಲ್ಲಿ ನಿಟ್ಟಿಸಿ, ಇನ್ನೇನು ಬೈಕ್ ಹತ್ತಿ ಹೊರಡಬೇಕೆನ್ನುವಷ್ಟರಲ್ಲಿ ಬೀನಾ ಸೇನ್ ಕೈ ಬೀಸುತ್ತಾ ಓಡಿ ಬರುತ್ತಿರುವುದು ಅವನಿಗೆ ಕಾಣಿಸಿತು.

ದುಡುದುಡು ಎಂದು ಓಡಿಬಂದವಳೇ ಏದುಸಿರುಬಿಡುತ್ತಾ, 'ಮನೆಗೆ ಡ್ರಾಪ್ ಮಾಡುತ್ತೀಯಾ?' ಎಂದು ಕೇಳಿದಳು. ಒಂದು ಕ್ಷಣ ಅವನು ಅವಾಕ್ಕಾಗಿ ಏನು ಉತ್ತರ ಹೇಳುವುದೆಂದು ಯೋಚಿಸುವಷ್ಟರಲ್ಲೇ ಅವನ ಉತ್ತರಕ್ಕೂ ಕಾಯದೇ ಬೈಕ್ ಏರಿಯೇಬಿಟ್ಟಳು. ಇನ್ನೂ ಅನುಮಾನಿಸುತ್ತಾ ನಿಂತೇ ಇದ್ದ ಸದಾನಂದನನ್ನು ನೋಡಿ, 'ಲೆಟ್ಸ್ ಗೋನಾ...' ಅಂದಳು. ಬೈಕ್ ಸ್ಟಾರ್ಟ್ ಮಾಡಿ ಅತ್ಯಂತ ನಿಧಾನಕ್ಕೆ ಆಫೀಸಿನ ಗೇಟಿನಿಂದ ಹೊರಬಂದು ರಸ್ತೆಗೆ ಇಳಿದ.

ಕತ್ತಲುಗಟ್ಟಲಾರಂಭಿಸಿದ ಆಕಾಶದಂಚಿನಲ್ಲಿ ದೊಡ್ಡ ಚಂದಿರನೊಬ್ಬ ಮೆಲ್ಲಗೆ ಮೂಡಿಬರುತ್ತಿದ್ದ. ಜನವರಿಯಲ್ಲೂ ಮುಗಿದಿರದ ಚಳಿಯಲ್ಲಿ, ಮುಖ್ಯ ರಸ್ತೆಗೆ ಬರುತ್ತಿದ್ದಂತೆ, ಬೀನಾ ಸೇನ್ ಅವನ ಸೊಂಟದ ಸುತ್ತಾ ಕೈ ಬಳಸಿ, 'ರಾತ್ರಿ ಎಲ್ಲಿ ಊಟ ಮಾಡುತ್ತೀಯಾ?' ಎಂದು ಕೇಳಿದಳು. ಸದಾನಂದ ತನ್ನೆಲ್ಲಾ ಗಲಾಟೆಗಳ ನಡುವೆ ರಾತ್ರಿಯೂಟ ಕುರಿತು ಯೋಚಿಸುವುದನ್ನು ಎಂದೋ ನಿಲ್ಲಿಸಿದ್ದ. ಉತ್ತರಿಸಲೇನೂ ಹೊಳೆಯದೆ ಮೌನವಾಗೇ ಇದ್ದ. ಅವನ ಮೌನದಿಂದ ಅವಳೇನೂ ಕಸಿವಿಸಿಗೊಂಡಂತೆ ಕಾಣಲಿಲ್ಲ. 'ತುಂಬಾ ಹಸಿವಾಗ್ತಿದೆ. ಕಮ್ ಆನ್, ಲೆಟ್ಸ್ ಗೋ ಟು ಸಮ್ ರೆಸ್ಟೋರೆಂಟ್ ಅಂಡ್ ಸೆಲಿಬ್ರೇಟ್ ಟುನೈಟ್!' ನಗುತ್ತಾ ಬೆನ್ನಿಗೆ ಒರಗಿ, ಕೈಯಿಂದ ಅವನ ಹೊಟ್ಟೆ ಬಳಸಿದಾಗ ಸದಾನಂದನಿಗೆ ಕಚಗುಳಿಯಿಟ್ಟಂತಾಯಿತು. 'ಡೋಂಟ್ ಸೇ ಎಗೈನ್ ನಾಟ್ ಇಂಟರೆಸ್ಟೆಡ್!' ಆಕ್ಷೇಪದ ಧ್ವನಿಯಲ್ಲಿ ಅವಳೆಂದಾಗ ಅವನ ಮುಖದಲ್ಲಿ ಕಂಡೂ ಕಾಣದಂತೆ ಒಂದು ಮಂದಹಾಸ ತೇಲಿಹೋಯಿತು.

ದಾರಿಯ ಉದ್ದಾನುದ್ದಕ್ಕೂ ಒಂಚೂರೂ ಬಾಯಿ ಮುಚ್ಚದೆ ಒಂದೇ ಸಮನೆ ಏನೇನೋ ಮಾತನಾಡುತ್ತಾ ಅವನಿಗೆ ಒರಗಿಕೊಂಡೇ ಕೂತಿದ್ದಳು ಅವಳು. ಯಾವ ಮಾತೂ ಸ್ಪಷ್ಟವಾಗಿ ಕೇಳದಿದ್ದರೂ ಇಂಪಾಗಿ ಉಲಿಯುವ ಆ ಕೊರಳ ನಾದ, ನಿರಂತರವಾಗಿ ತೇಲಿ ಬರುವ ಸಂಗೀತದಲೆಯಂತೆ ಅವನ ಕಿವಿಯಲ್ಲಿ ಮಾರ್ದನಿಸುತ್ತಿತ್ತು. ಅವಳು ಪೂಸಿಕೊಂಡ ಸುಗಂಧ ಹಿತವಾಗಿ ಮೂಗಿಗೆ ಅಡರಿ, ಯಾವುದೋ ಗಂಧರ್ವ ಲೋಕದಲ್ಲಿ ಸರಿದುಹೋಗುತ್ತಿದ್ದಂತ ಅನುಭಾವದಲ್ಲಿ ಅವನು ತೇಲಾಡುತ್ತಿರುವಾಗ, 'ಇವತ್ತು ನಂದು ಟ್ರೀಟ್', ಅವಳು ಹೇಳಿದಾಗ ಮರು ಮಾತಿಲ್ಲದೆ ಸದಾನಂದ ಕನಸಿನಲ್ಲೆಲ್ಲೊ ಓಲಾಡುತ್ತಿರುವವನಂತೆ ಅವಳು ಹೇಳಿದ ಕಡೆ ಗಾಡಿ ಓಡಿಸಿದ.